# ಕಲ್ಲಿನಲ್ಲಿ ಎತ್ತಿನ ಬಂಡಿ

ಮೋಟಾರು, ಆಟೊ, ಕಾರುಗಳು ಬಂದ ನಂತರ ಎತ್ತಿನ ಬಂಡಿಯನ್ನು ಕೇಳುವವರಿಲ್ಲ. ಅಲ್ಲಿಇಲ್ಲಿ, ಒಬ್ಬರುಇಬ್ಬರು ತಮ್ಮ ಕೂಲಿ ಕೆಲಸ ಬಿಡಲಾಗದೆ ಆಟೊ ಅಥವಾ ಟ್ರ್ಯಾಕ್ಟರ್ ಕೊಳ್ಳಲಾಗದೆ ಇನ್ನೂ ಜೋಡೆತ್ತಿನ ಬಂಡಿ ಓಡಿಸುತ್ತಾ ಸಾಮಾನು ಸಾಗಿಸುವುದನ್ನು ನೋಡಿರಬಹುದು. ಆದರೆ ಈ ಗಾಡಿ ಮಾತ್ರ ವಿಶೇಷದ್ದು. ಮುಂದೆ ಎತ್ತುಗಳ ಕುತ್ತಿಗೆ ಮೇಲೆ ಸರಿಯಾಗಿ ಕೂರುವಂತಹ ನೊಗ. ಅದು ಜಾರದ ಹಾಗೆ ಇರುವ ಬೆಣೆಗಳು. ಸೂರ್ಯನಂತಹ ಎರಡು ಚಕ್ರ. ಗಾಡಿಯಲ್ಲಿ ಕುಳಿತಾಗ ಅಲುಗಾಡದಂತೆ ಹಿಡಿದುಕೊಳ್ಳಲು ಇರುವ ಪಟ್ಟಿಗಳು. ಇಂತಹ ಸಾರಿಗೆ ವ್ಯವಸ್ಥೆ ಈಗ ಕೇವಲ ವಸ್ತುಸಂಗ್ರಹಾಲಯಗಳ ಚೌಕಟ್ಟಿನೊಳಗೆ ಕಾಣಸಿಗುವುದು.

ಆದರೆ ಸುಂದರವಾಗಿ ಕಲ್ಲಿನಲ್ಲಿ ಕೆತ್ತಿದ್ದ ವಿಶೇಷ ಎತ್ತಿನ ಬಂಡಿ ಕಾರ್ಕಳ – ಧರ್ಮಸ್ಥಳ ರಸ್ತೆಯ ನಲ್ಲೂರು ಸಮೀಪದ ಶಿಲ್ಪಕಲಾ ಕೇಂದ್ರವೊಂದರಲ್ಲಿ ಕಾಣಿಸಿತು. ಅಮೋಘ ಕೆತ್ತನೆ, ಸೂಕ್ಷ್ಮ ಕೆಲಸ, ಹದವಾದ ಗಾತ್ರ ಮತ್ತು ಆಕಾರದಿಂದ ಮನ ಸೆಳೆಯಿತು. ವಿಚಾರಿಸಲಾಗಿ ಅದು ಕಲಾಭಿಮಾನಿಯೊಬ್ಬರು ತಮ್ಮ ಮನೆಯ ಅಂಗಳದಲ್ಲಿ ಇಡಲು ಈ ಶಿಲ್ಪಿಗಳಲ್ಲಿ ಕೋರಿದ್ದಾರೆ. ಹಾಗಾಗಿ ಕೇವಲ ರೆಸಾರ್ಟ್‌ಗಳಲ್ಲಿ ಮತ್ತು ವಸ್ತುಸಂಗ್ರಹಾಲಯಗಳಲ್ಲಿ ಮಾತ್ರ ಕಾಣುವ ಈ ಸೊಬಗಿನ ಚಕ್ಕಡಿ ಮನೆಯ ಅಂಗಳಕ್ಕೆ ಬಂದಾಯಿತು. ಬೆಲೆ ಕೇಳಿ ತಲೆ ತಿರುಗಿತು. ಆದರೆ ಈ ಶಿಲ್ಪಿಗಳ ಕಲಾಚಾತುರ್ಯಕ್ಕೆ ಬೆಲೆಯುಂಟೆ?

–ಎಸ್. ಶಿಶುಪಾಲ, ದಾವಣಗೆರೆ







# ಬೈಕ್‌ಗೂ ಬಂತು ಟ್ರಾಲಿ!

ಹಿಂದೊಮ್ಮೆ ಎಲ್ಲ ರೈತರು ಎತ್ತಿನ ಗಾಡಿ ಹೊಂದಿರುತ್ತಿದ್ದರು. ನಂತರ ಆ ಗಾಡಿ ಸ್ಥಾನಕ್ಕೆ ಟೈರು ಗಾಡಿಗಳು ಬಂದವು. ಈಚೆಗೆ ಕೃಷಿ ಚಟುವಟಿಕೆಯಲ್ಲಿ ವಿವಿಧ ಯಂತ್ರಗಳು ಬಳಕೆಗೆ ಬಂದಿವೆ. ಟ್ರ್ಯಾಕ್ಟರ್, ಮಿನಿ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಆವರಿಸಿಕೊಂಡು ರೈತರು ಎತ್ತುಗಳನ್ನು ಹಾಗೂ ಎತ್ತಿನ ಬಂಡಿಯನ್ನು ಕೈಬಿಟ್ಟಿದ್ದರೆ. ಅದರಿಂದ ಅವುಗಳ ಸಂಖ್ಯೆ ಕಡಿಮೆ ಕ್ಷೀಣಿಸಿದೆ. ಸಣ್ಣ ರೈತರು ಬಾಡಿಗೆ ಕೃಷಿ ಯಂತ್ರ ಬಳಕೆಯತ್ತ ಮುಖಮಾಡಿದ್ದಾರೆ. ಅಂತೆಯೇ ರೈತರಿಬ್ಬರು ರಾಸಾಯನಿಕ ಗೊಬ್ಬರದ ಮೂಟೆ ಸಾಗಿಸಲು ಹಾಗೂ ಹಸುಗಳಿಗೆ ಹಸಿ ಮೇವು ತರಲು ತಮ್ಮ ದ್ವಿಚಕ್ರ ವಾಹನಕ್ಕೆ ಟ್ರಾಲಿ ಅಳವಡಿಸಿಕೊಂಡಿದ್ದಾರೆ. ದ್ವಿಚಕ್ರ ವಾಹನದ ಕಬ್ಬಿಣದ ಟ್ರಾಲಿಗೆ ಎರಡು ಸ್ಕೂಟರ್ ಚಕ್ರಗಳನ್ನು ಅಳವಡಿಸಲಾಗಿದೆ. ಆ ಮೂಲಕ ದ್ವಿಚಕ್ರ ವಾಹನವನ್ನು ಸಂಚಾರಕ್ಕೂ ಹಾಗೂ ಕೃಷಿ ಚಟುವಟಿಕೆಗೂ ಬಳಸಿಕೊಳ್ಳುವ ಉಪಾಯ ಕಂಡುಕೊಂಡಿದ್ದಾರೆ.

–ಸಿ. ಸಿದ್ದರಾಜು ಆಲಕೆರೆ, ಮಂಡ್ಯ

# 500 ತಳಿ ಭತ್ತದ ಬೀಜ

ಆಧುನಿಕತೆಯ ಭರಾಟೆಯಲ್ಲಿ ಇಂದು ಕೃಷಿಯತ್ತ ಒಲವು ತೋರುವವರ ಸಂಖ್ಯೆ ಕ್ಷೀಣಿಸುತ್ತಿದೆ. ರೈತರು ಪರ್ಯಾಯ ಉದ್ಯೋಗದ ಹುಡುಕಾಟದಲ್ಲಿರುವ ಕಾಲಘಟ್ಟದಲ್ಲಿ, ಹಡಿಲು ಬಿದ್ದ ಗದ್ದೆಯಲ್ಲಿ ಹಲವು ತಳಿಗಳ ಭತ್ತ ನಾಟಿ ಮಾಡುತ್ತಿದ್ದಾರೆ ಸಾಣೂರು ಗ್ರಾಮದ ಮುರತ್ತಂಗಡಿಯ ಅಬೂಬಕ್ಕರ್. ಇವರು ತಮ್ಮ ಬಳಿ ಸುಮಾರು 500 ತಳಿಯ ಭತ್ತವನ್ನು ಸಂಗ್ರಹಿಸಿದ್ದಾರೆ. ಹಿಂದೆ ಕೃಷಿ ಮಾಡುತ್ತಿದ್ದ ವಿವಿಧ ತಳಿಯ ಭತ್ತವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಅವರು ವಿವಿಧ ತಳಿಯ ಭತ್ತದ ಸಂಗ್ರಹ ಕಾರ್ಯವನ್ನು ಮಾಡುತ್ತಿದ್ದಾರೆ.




–ಪ್ರಣಮ್ಯ ಟಿ. ಯಾದವ್

